## ವಾರದ ಪತ್ರ

### ಎಂಬತ್ತೆರಡಲ್ಲ, ಇಪ್ಪತ್ತೆಂಟು... ಅಷ್ಟೇ!

ಝೀ ಕನ್ನಡದ 'ಕುಟುಂಬ – ಹೊಸವರ್ಷದ ಶುಭಾರಂಭ' ಸಂಚಿಕೆ ಹೊಸ ಚಿಗುರು ಹಳೆ ಬೇರುಗಳ ಸಮ್ಮಿಲನದಿಂದ ಅರ್ಥಪೂರ್ಣವಾಗಿತ್ತು. 'ಶ್ರೀರಸ್ತು ಶುಭಮಸ್ತು'ವಿನ ದತ್ತ ಪಾತ್ರಧಾರಿ ವೆಂಕಟರಾವ್ ತಮ್ಮ ಜೀವನೋತ್ಸಾಹದಿಂದ ಗಮನ ಸೆಳೆದರು. ಎಂಬತ್ತೆರಡು ವಯಸ್ಸಿನ ವೆಂಕಟರಾವ್ ತಮ್ಮ ವಯಸ್ಸನ್ನು ಕೇವಲ ಇಪ್ಪತ್ತೆಂಟು ಎಂದರಲ್ಲದೇ, ತಮ್ಮ ಅಭಿನಯ ಕೌಶಲ್ಯವನ್ನು ಲೀಲಾಜಾಲವಾಗಿ ಪ್ರದರ್ಶಿಸಿದರು.

ವರನಟ ರಾಜ್ ಕುಮಾರ್ ಜೊತೆಗೆ ಶಂಕರ್ ನಾಗ್, ಶಿವರಾಜ್ ಕುಮಾರ್, ಉಪೇಂದ್ರ, ರವಿಚಂದ್ರನ್ ಮೊದಲಾದವರ ಸಂಭಾಷಣೆ ಸಹಿತ ಅಭಿನಯವನ್ನು ಅನುಕರಿಸಿ ಹೊಸ ಚಿಗುರು ನಾಚುವಂತೆ ಮಾಡಿದರು. ಸುಮ್ಮನೆ ಕುಳಿತಾಗ ವಯೋಸಹಜವಾಗಿ ನಡುಗುತ್ತಿದ್ದ ಅವರ ಕತ್ತು, ಅಭಿನಯಿಸುವಾಗ ಪಡೆಯುವ 'ಗತ್ತು', ಮೂಗಿನ ಮೇಲೆ ಬೆರಳು ಇಡುವಷ್ಟು ರೋಮಾಂಚಕವಾಗಿತ್ತು.

–ವಾ. ಮುರಳೀಧರ, ತೀರ್ಥಹಳ್ಳಿ

### ಕನ್ನಡತಿಗೆ ಅಪೌಷ್ಟಿಕತೆಯ ಸಮಸ್ಯೆ

ಕಲರ್ಸ್ ಕನ್ನಡದ 'ಕನ್ನಡತಿ' ಅಪೌಷ್ಟಿಕತೆಯಿಂದ ಬಳಲುತ್ತಿರುವಂತಿದೆ. ಮನೆಯಲ್ಲಿ ಅಡುಗೆ ಮಾಡಲು ಕೆಲಸದವರು ಇದ್ದಾರೆ. ಆದರೂ ಕಥಾನಾಯಕಿ ತನ್ನ ಕೈ ಗಾಯಕ್ಕೆ ಬಟ್ಟೆ ಸುತ್ತಿಕೊಂಡು ಅಡುಗೆ ಮಾಡುವುದು ಎಷ್ಟರಮಟ್ಟಿಗೆ ನೈಜವಾಗಿರಲು ಸಾಧ್ಯ. ಧಾರಾವಾಹಿ ಸಹಜತೆಯನ್ನು ಧಿಕ್ಕರಿಸಿ ದಿಕ್ಕುತಪ್ಪುತ್ತಿದೆ.

–ಲಲಿತಾ ಬೆಂಗಳೂರು

### ಹೆಂಗಸರೆಂದರೆ ಅಳುವ ಯಂತ್ರಗಳೆ?

ಕಳೆದ ಎರಡು ದಶಕದ ಅವಧಿಯಲ್ಲಿ ಪ್ರಪಂಚದಲ್ಲಿ ಏನೆಲ್ಲ ಬದಲಾವಣೆಗಳು ಆದವು. ಆದರೆ ಟೀವಿಯ ಧಾರಾವಾಹಿಗಳಲ್ಲಿ ಬರುವ ಹೆಂಗಳೆಯರು ಪ್ರತಿದಿನ ಲೀಟರ್‌ಗಟ್ಟಲೆ ಕಣ್ಣೀರು ಹರಿಸುವುದು ಮಾತ್ರ ಬದಲಾಗಲಿಲ್ಲ ಎನ್ನುವುದು ವಿಸ್ಮಯವೇ ಸರಿ. ಹೆಂಗಸರೆಂದರೆ ಅಳುವ ಯಂತ್ರಗಳೆಂದು ನಿರ್ಮಾತೃಗಳು ಭಾವಿಸಿದಂತೆ ಇದೆ.

–ದೀಪಕ್ ಕಂಬದಕೋಣೆ




### ಸಂಗೀತದೊಂದಿಗೆ ಮಾನವೀಯತೆಯ ಜುಗಲಬಂದಿ

ಝೀ ಕನ್ನಡದಲ್ಲಿ 'ಸರಿಗಮಪ' ಲಿಟ್ಲ್ ಚಾಂಪ್ ಸ್ಪರ್ಧಿಗಳು ಹಿರಿಯರಿಗೆ ತಾವೇನೂ ಕಮ್ಮಿ ಇಲ್ಲ ಎನ್ನುವ ಹಾಗೆ ತಮ್ಮ ಗಾನಸುಧೆಯಿಂದ ಮೆಚ್ಚುಗೆ ಗಳಿಸಿದ್ದಾರೆ. ಸಂಗೀತದ ಪ್ರತಿಭೆಯ ಜೊತೆಗೆ ಮಾನವೀಯತೆಯನ್ನು ಪ್ರದರ್ಶಿಸುತ್ತಿದ್ದಾರೆ. ಇದರಿಂದ ಹಲವು ಕುಟುಂಬಗಳಿಗೆ ಆರ್ಥಿಕ ನೆರವು ನೀಡಿದಂತಾಗಿದೆ.

–ಎಂ.ಎಸ್. ಉಷಾ ಪ್ರಕಾಶ್, ಮೈಸೂರು

### ಅಧಿಕಾರದ ಕುರ್ಚಿಯಲ್ಲಿ ಉತ್ತಮ ನಡೆ

ಸಿರಿ ಕನ್ನಡದ 'ಮತ್ತೆ ಮಾಯಾಮೃಗ' ಧಾರಾವಾಹಿಯಲ್ಲಿ ವರ್ಷಾಳ ವ್ಯಕ್ತಿತ್ವವನ್ನು ಚೆನ್ನಾಗಿ ಬಿಂಬಿಸಿದ್ದಾರೆ. ಈ ಹಿಂದೆ ಒಂದು ಅವಕಾಶಕ್ಕಾಗಿ ಬಾಗಿಲು ಬಡಿದಾಗ ಅವಳಿಗೆ ಸಿಕ್ಕಿದ್ದು ತಿರಸ್ಕಾರ ಹಾಗೂ ಅವಮಾನದ ನುಡಿ. ಈಗ ಆಕೆ ಸರ್ವಾಧಿಕಾರಿ ರಶ್ಮಿಯ ಜಾಗವನ್ನು ಆಕ್ರಮಿಸಿ, ಒಂದು ಒಳ್ಳೆಯ ಸಂದೇಶ ನೀಡಲು ಹೊರಟಿರುವುದು ಸರಿಯಾದ ದಾರಿ ಅನ್ನಿಸುತ್ತೆ.

–ಭಾರತೀ ಗಂಗಾಧರ್, ಬೆಂಗಳೂರು

### ಸುದ್ದಿ ವಾಹಿನಿಗಳಿಗೆ ಕೊರೊನಾ ಬಾಧೆ

ಅರೇ ಇದೇನಿದು, ಯಾವ ರಣ ಕಹಳೆ ಎಂದು ಭಯ ಬೇಡ! ಇತ್ತೀಚೆಗೆ ಮತ್ತೆ ಹೊಸ ತಳಿಯ ರೂಪಾಂತರಿ ಕೊರೊನಾ ವೈರಸ್ ಕುರಿತು ಸುದ್ದಿಯನ್ನು ಈ ರೀತಿ ಮಾಡುತ್ತಿದ್ದಾರೆ. 'ಮತ್ತೆ ವಕ್ಕರಿಸಿಯೇ ಬಿಟ್ಟಿತಾ', 'ಹಿಂದೆಂದೂ ಕಂಡರಿಯದ ಮಹಾ ಮಾರಿ', 'ಮನು ಕುಲದ ಸರ್ವನಾಶ ಮಾಡಿಯೇ ಬಿಡುತ್ತಾ', 'ಈ ಬಾರಿ ಲಸಿಕೆಗೆ ಹಾಹಾಕಾರ', 'ದಿಕ್ಕೆಟ್ಟ ಜನತೆ', 'ಬೆಂಗಳೂರಿಗರ ಜೀವನ ಬರ್ಬಾದ್', 'ಹೊಸ ತಳಿಗೆ ಮಕ್ಕಳು ವೃದ್ಧರೇ ಟಾರ್ಗೆಟ್', 'ಎರಡು ವರ್ಷಗಳ ಆಘಾತ ಮತ್ತೆ ರಿಪೀಟ್', 'ಆಸ್ಪತ್ರೆಗಳು ಹೌಸ್‌ಫುಲ್ ಆಗಿಯೇ ಬಿಡುತ್ತಾ?' ಇಂತಹ ಗಾಬರಿಯ ನುಡಿ ಸಿಡಿಗಳು ಸುದ್ದಿವಾಹಿನಿಯ ತಲೆಬರಹಗಳು. ಈ ಪದ ಪುಂಜಗಳು ಕೆಲವು ಉದಾಹರಣೆ ಅಷ್ಟೇ. ಎಲ್ಲಿಯೂ ಕಾಣದ ಕೊರೊನಾ ಸುದ್ದಿ ವಾಹಿನಿಗಳನ್ನು ಬಾಧಿಸುತ್ತಿರುವಂತಿದೆ.

–ಆರ್. ವೀರೇಶ್ ಕುಮಾರ್, ಬೆಂಗಳೂರು

### ಕಲಾಪ ವೀಕ್ಷಣೆಯ ಸೊಗಸಾದ ಅನುಭವ

ಬೆಳಗಾವಿಯಲ್ಲಿ ಈಚೆಗೆ ನಡೆದ ಕರ್ನಾಟಕ ವಿಧಾನ ಮಂಡಲದ ಉಭಯ ಸದನಗಳ ಚಳಿಗಾಲದ ಅಧಿವೇಶನದ ಕಾರ್ಯಕಲಾಪಗಳನ್ನು 'ಚಂದನ' ವಾಹಿನಿಯಲ್ಲಿ ಮನೆಯಲ್ಲೇ ಕುಳಿತು ಆರಾಮಾಗಿ ನೋಡಿ ಖುಷಿ ಪಟ್ಟೆ. ನೇರ ಪ್ರಸಾರದಲ್ಲಿ ಚಿತ್ರಗಳು ಅತ್ಯಂತ ಸ್ಪಷ್ಟವಾಗಿದ್ದು, ಧ್ವನಿ ಸಹ ತುಂಬಾ ಸ್ಪಷ್ಟವಾಗಿತ್ತು. ಸುವರ್ಣ ಸೌಧದಲ್ಲಿಯೇ ಕುಳಿತು ನೋಡಿದರೂ ಇಷ್ಟು ಸ್ಪಷ್ಟವಾಗಿ ಕಾಣಿಸುತ್ತಿರಲಿಲ್ಲವೇನೋ?

–ನಾರಾಯಣ ಯಾಜಿ ಶಿರಾಲಿ

### ಮನಸ್ಸು ತುಂಬಿದ ಕನಕದಾಸ

ಟೀವಿಗಳಲ್ಲಿ ಪ್ರಸಾರವಾಗುವ ಬಹುತೇಕ ಸಿನಿಮಾಗಳಲ್ಲಿ ಕೆಲವು ಸನ್ನಿವೇಶ–ಹಾಡುಗಳಿಗೆ ಕತ್ತರಿ ಪ್ರಯೋಗ ಸಾಮಾನ್ಯ. ಇದಕ್ಕೆ ಅಪವಾದ ಎಂಬಂತೆ ಮೊನ್ನೆ ಕಸ್ತೂರಿ ವಾಹಿನಿಯಲ್ಲಿ ರಾಜ್‌ಕುಮಾರ್ ಅಭಿನಯದ 'ಭಕ್ತ ಕನಕದಾಸ' ಸಿನಿಮಾ ಸಂಪೂರ್ಣವಾಗಿ ಪ್ರಸಾರವಾಯಿತು. ಸಂಪೂರ್ಣ ಪಾತ್ರದಲ್ಲೇ ಪರಕಾಯ ಪ್ರವೇಶ ಮಾಡುವ ರಾಜ್‌ಕುಮಾರ್ ಅಭಿನಯವನ್ನು ಈ ಸಿನಿಮಾದಿಂದ ಕಣ್ತುಂಬಿಕೊಂಡಿದ್ದಲ್ಲದೆ, ಪಿ.ಬಿ. ಶ್ರೀನಿವಾಸ್ ಅವರ ಕಂಠಸಿರಿಯ 'ಬಾಗಿಲನ್ನು ತೆರೆದು ಸೇವೆಯನು ಕೊಡು ಹರಿಯೇ' ಭಕ್ತಿಪೂರ್ಣ ಗೀತೆಯನ್ನು ಕೇಳಿ ಮನಸ್ಸು ತುಂಬಿಬಂತು. ಸ್ವತಃ ರಾಜ್‌ಕುಮಾರ್ ಅವರೇ ನಾನು ಶರೀರ, ಪಿ.ಬಿ.ಎಸ್. ನನ್ನ ಶಾರೀರ ಎಂದು ಹೇಳುತ್ತಿದ್ದ ಮಾತು ಅತಿಶಯೋಕ್ತಿ ಅಲ್ಲ.

–ಟಿ.ಎಸ್. ಪ್ರತಿಭಾ, ಚಿತ್ರದುರ್ಗ

### ಕಿರುತೆರೆಯಲ್ಲಿ ರಸಹೀನ ಹೊಸ ವರ್ಷ

'ಬರುಬರುತ್ತಾ ರಾಯರ ಕುದುರೆ ಕತ್ತೆ ಆಯ್ತು' ಎನ್ನುವುದು ಗಾದೆ. ಟೀವಿ ಚಾನೆಲ್‌ಗಳ ಹೊಸ ವರ್ಷಾಚರಣೆ ನೋಡಿದಾಗ ಈ ಗಾದೆ ನೆನಪಿಗೆ ಬರುತ್ತದೆ. ಹೊಸ ವರ್ಷದ ಕೆಲವು ಕಾರ್ಯಕ್ರಮಗಳನ್ನು ಕಾಟಾಚಾರಕ್ಕೆ ಮಾಡಿದಂತೆ ಕಾಣುತ್ತಿತ್ತು. ಈ ವರ್ಷ ಹಿಂದಿನ ವರ್ಷಗಳಂತೆ ಕೋವಿಡ್ ಭಯ ಇರಲಿಲ್ಲ. ಹೊಸ ಹೊಸ ಪರಿಕಲ್ಪನೆ ಮತ್ತು ಐಡಿಯಾಗಳ ಕೊರತೆಯೋ ಅಥವಾ ಕಲಾವಿದರ ಕೊರತೆಯೋ, ಒಟ್ಟಿನಲ್ಲಿ ವಾಹಿನಿಗಳು ವೀಕ್ಷಕರನ್ನು ನಿರಾಶೆಗೊಳಿಸಿದ್ದು ಮಾತ್ರ ಸತ್ಯ.

–ರಮಾನಂದ ಶರ್ಮಾ, ಬೆಂಗಳೂರು